**ದಿನಾಂಕ: 07.08.2020 ರಂದು ಸಂಜೆ 04.30 ಕ್ಕೆ ವಿಡಿಯೋ ಕಾನ್ಫರೆನ್ಸ್ ಮುಖಾಂತರ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ಟಿ.ಎಂ. ವಿಜಯ್ ಭಾಸ್ಕರ್ ಭಾ.ಆ.ಸೇ ರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ 20ನೇ ರಾಜ್ಯ ಮಟ್ಟದ ಪ್ರಗತಿ ಪರಿಶೀಲನ ಸಭೆಯ ನಡವಳಿ.**

ಸಭೆಯ ಹಾಜರಾತಿ ಪಟ್ಟಿ ಲಗತ್ತಿಸಿದೆ.

ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ಟಿ.ಎಂ. ವಿಜಯ ಭಾಸ್ಕರ್ ರವರನ್ನು ಮತ್ತು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಜನ ಪ್ರತಿನಿಧಿಗಳು, ಅಧಿಕಾರಿ ವೃಂದ ಮತ್ತು ಅಧಿಕಾರೇತರ ಸದಸ್ಯರಿಗೆ ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಲಾಯಿತು.

ದಿನಾಂಕ: 18.03.2020 ರಂದು ನಡೆದ 19ನೇ ರಾಜ್ಯ ಮಟ್ಟದ ಸಭಾ ನಡವಳಿಯನ್ನು ಅಂಗೀಕರಿಸಿ, ಕೈಗೊಂಡ ನಿರ್ಣಯಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ರವರು ಪರಿಶೀಲಿಸಿದರು.

1. ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ನಿರ್ಮಿಸುವ ಬಗ್ಗೆ :-

   (ಅ) 51 ಅಂಗನವಾಡಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ PMJVK ಯೋಜನೆಯಡಿ ಕಳುಹಿಸಿರುವುದನ್ನು ಹಾಗೂ ಕೇಂದ್ರ ಸರ್ಕಾರ ಮಂಜೂರಾತಿ ನೀಡಿರುವುದನ್ನು ಗಮನಿಸಲಾಯಿತು.

   (ಆ) ಉಳಿದ 203 ಅಂಗನವಾಡಿಗಳನ್ನು ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ನಿರ್ಮಿಸಲು ಗ್ರಾಮೀಣ ಪ್ರದೇಶಗಳಲ್ಲಿ MNREGA ಯೋಜನೆಯಡಿ ಮತ್ತು ನಗರ ಪ್ರದೇಶಗಳಲ್ಲಿ ಪೌರಾಡಳಿತ ಇಲಾಖೆ ಸಹಯೋಗದೊಂದಿಗೆ ನಿರ್ಮಿಸುವಂತೆ ತಿಳಿಸಲಾಯಿತು.

   (ಇ) ಅಂಗನವಾಡಿ ಕೇಂದ್ರಗಳು ಸರ್ಕಾರಿ ಶಾಲೆಗಳ ಆವರಣದಲ್ಲೇ ನಿರ್ಮಿಸಲು ಮತ್ತು ಸ್ಥಳದ ಕೊರತೆ ಇದ್ದಲ್ಲಿ ಶಾಲೆಯ ಪಕ್ಕದಲ್ಲಿ ಅಥವಾ ಮೇಲ್ಭಾಗದಲ್ಲಿ ನಿರ್ಮಿಸುವಂತೆ ಸೂಚಿಸಲಾಯಿತು. ಸ್ಥಳದ ಕೊರತೆ ಇದ್ದಲ್ಲಿ 2 ಮಹಡಿಯ ಕಟ್ಟಡ ನಿರ್ಮಿಸಿ, ನೆಲ ಮಹಡಿಯಲ್ಲಿ ಅಂಗನವಾಡಿಯನ್ನು ನಿರ್ಮಿಸುವಂತೆ ತಿಳಿಸಲಾಯಿತು ಮತ್ತು ಅಂಗನವಾಡಿಗಳ ನಿರ್ಮಾಣಕ್ಕಾಗಿ ಕಾಲ ಮಿತಿಯನ್ನು ಇಟ್ಟುಕೊಳ್ಳುವಂತೆ ತಿಳಿಸಲಾಯಿತು.

(ಈ) ಹಲವಾರು ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಕೊಠಡಿಗಳಲ್ಲಿ ಅಂಗನವಾಡಿಗಳಾಗಿ ಉಪಯೋಗಿಸಲು ಸೂಚಿಸಲಾಯಿತು.

**(ಕ್ರಮ: ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ)**

2. ಉರ್ದು ಶಿಕ್ಷಕರ ನೇಮಕಾತಿಯ ಬಗ್ಗೆ :-

ಜುಲೈ 05 2020 ಕ್ಕೆ ನಡೆಯಬೇಕಿದ್ದ ಟಿ.ಇ.ಟಿ ಪರೀಕ್ಷೆಯು ಕೋವಿಡ್-19 ಸಮಸ್ಯೆಯಿಂದ ಮುಂದೂಡಲಾಗಿದ್ದು, ಟಿ.ಇ.ಟಿ ಪರೀಕ್ಷೆಯ ಬಳಿಕ ಶಿಕ್ಷಕರ ನೇಮಕಾತಿಯ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದೆಂದು ಜಂಟಿ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ ರವರು ತಿಳಿಸಿದರು.

ಮಾನ್ಯ ಸಂಸತ್ ಸದಸ್ಯರಾದ ಶ್ರೀ. ಶಿವಕುಮಾರ ಚನ್ನಬಸಪ್ಪ ಉದಾಸಿ ರವರು ಅರ್ಹತಾ ಪರೀಕ್ಷೆಯಲ್ಲಿ (TET) ಅಭ್ಯರ್ಥಿಗಳು ಉತ್ತೀರ್ಣರಾಗದಿರುವುದನ್ನು ಗಮನಿಸಿ, ಜಾಹಿರಾತುಗಳ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿ ಜಿಲ್ಲಾ ಮಟ್ಟದಲ್ಲಿ ತರಬೇತಿ ನೀಡಿದಲ್ಲಿ ಅರ್ಹತಾ (TET) ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಪ್ರಮಾಣ ಹೆಚ್ಚಿಸಬಹುದೆಂದು ಅಭಿಪ್ರಾಯ ಪಟ್ಟರು. ಹಾಗೂ ತರಬೇತಿಯನ್ನು ನೀಡಲು ಕ್ರಮ ವಹಿಸುವಂತೆ ತಿಳಿಸಲಾಯಿತು.

ಉರ್ದು ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಆಯ್ಕೆಯಾಗಿರುವ ಒಟ್ಟು 90 ಅಭ್ಯರ್ಥಿಗಳು ಅರ್ಹರಾಗಿದ್ದು ಕೇವಲ 59 ಅಭ್ಯರ್ಥಿಗಳು ಮಾತ್ರ ನೇಮಕಗೊಂಡಿರುವ ಬಗ್ಗೆ ಗಮನಿಸಲಾಗಿ, ಬಾಕಿ 31 ಸದರಿ ಅಭ್ಯರ್ಥಿಗಳ ಒಪ್ಪಿಗೆಯೊಂದಿಗೆ ಬೇರೆ ಜಿಲ್ಲೆಗೆ ನೇಮಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲು ಸೂಚಿಸಲಾಯಿತು.

**(ಕ್ರಮ : ನಿರ್ದೇಶಕರು, ಉರ್ದು ಮತ್ತು ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ)**

3. ವಸತಿ ಇಲಾಖೆಯ ಬಗ್ಗೆ ಪ್ರಸ್ತಾಪಿಸಿದಾಗ-

ರಾಜ್ಯ ಸರ್ಕಾರದ ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತರಿಗಾಗಿ ಶೇ.10 ರಿಂದ ಶೇ.15 ಕ್ಕೆ ಮೀಸಲಾತಿಯನ್ನು ಏರಿಸುವ ನೀತಿಯು ಸಚಿವ ಸಂಪುಟಕ್ಕೆ ಮಂಡಿಸಬೇಕಾಗಿದ್ದು, ಸಚಿವ ಸಂಪುಟದ ನಿರ್ಣಯದಂತೆ ಕ್ರಮ ವಹಿಸಲಾಗುವುದೆಂದು, ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ ರವರು ತಿಳಿಸಿದರು.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ)**

4. ಅಲ್ಪಸಂಖ್ಯಾತರ ಮುಸ್ಲಿಂ ಸಮುದಾಯದವರಿಗೆ ರಾಜ್ಯ ಸರ್ಕಾರದ ಪ್ರವರ್ಗ – 1 ಮತ್ತು ಪ್ರವರ್ಗ 2ಎ ಮತ್ತು ಕೇಂದ್ರ ಸರ್ಕಾರದ ಒಬಿಸಿ ಪ್ರಮಾಣ ಪತ್ರವನ್ನು ಪಡೆಯಲು ಆಗುತ್ತಿರುವ ತೊಂದರೆಯ ಬಗ್ಗೆ ಪ್ರಸ್ತಾಪಿಸಲಾಗಿ, ಜಾತಿ ಪ್ರಮಾಣ ಪತ್ರ ನೀಡಲು ಅನುಸರಿಸುತ್ತಿರುವ ಪದ್ಧತಿಯನ್ನೇ ಪುನರ್‌ಉಚ್ಛರಿಸಿ, ಸಕ್ಷಮ ಪ್ರಾಧಿಕಾರಗಳಿಗೆ ಪುನಃ ಸುತ್ತೋಲೆ ನೀಡುವಂತೆ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆಗೆ ತಿಳಿಸಲಾಯಿತು.

**(ಕ್ರಮ : ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ)**

5. ಸರ್ಕಾರಿ ಇಲಾಖೆಗಳಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯತೆ ಬಗ್ಗೆ :-

ಜಂಟಿ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ರವರು ಕೆಲವು ಇಲಾಖೆಗಳಿಂದ ಅಲ್ಪಸಂಖ್ಯಾತರ ಪ್ರಾತಿನಿಧ್ಯತೆ ಬಗ್ಗೆ ಮಾಹಿತಿ ಪಡೆಯುವುದು ಬಾಕಿ ಇರುವುದಾಗಿ ತಿಳಿಸಿದಾಗ, ಮುಂದಿನ ಸಭೆಯ ಒಳಗಾಗಿ ಮಾಹಿತಿಯನ್ನು ಪಡೆಯುವಂತೆ ತಿಳಿಸಲಾಯಿತು.

**(ಕ್ರಮ : ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ)**

6. ಕೌಶಲ್ಯಾಭಿವೃದ್ಧಿ ಇಲಾಖೆಯ ಪ್ರಗತಿಯ ಬಗ್ಗೆ:-

ಎನ್.ಯು.ಎಲ್.ಎಂ, ಎನ್.ಆರ್.ಎಲ್.ಎಂ ಮತ್ತು ಐಟಿಐ ಉನ್ನತೀಕರಣದಲ್ಲಿ (Upgradation) ಸಾಕಷ್ಟು ಪ್ರಗತಿಯಾಗದೇ ಇರುವುದನ್ನು ಗಮನಿಸಿದಾಗ, ಪ್ರತಿಕ್ರಿಯಿಸಿದ ಸರ್ಕಾರದ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಇಲಾಖೆ ರವರು ಕೋವಿಡ್-19 ಸಮಸ್ಯೆ ಇದ್ದ ಕಾರಣ, ಯೋಜನೆಗಳಲ್ಲಿ ಪ್ರಗತಿಯಾಗಿಲ್ಲದಿರುವುದೆಂದು ತಿಳಿಸಿ, ಪ್ರಗತಿಯನ್ನು ಚುರುಕುಗೊಳಿಸಲಾಗುವುದೆಂದು ತಿಳಿಸಿದರು.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಇಲಾಖೆ)**

7. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಬಗ್ಗೆ:-

(ಅ) ಕೋಮು ಘಟನೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಶಾಂತಿ ಸಭೆಗಳನ್ನು ಕೇವಲ 7 ಜಿಲ್ಲೆಗಳಲ್ಲಿ ಮಾತ್ರ ನಡೆಸಿದ್ದು, ಉಳಿದ ಜಿಲ್ಲೆಗಳಲ್ಲಿಯೂ ಸಹ ಶಾಂತಿ ಸಭೆಗಳನ್ನು ನಡೆಸುವಂತೆ ಸೂಚನೆ ನೀಡಲು ತಿಳಿಸಲಾಯಿತು.

(ಆ) 6 ತಿಂಗಳ ಅವಧಿ ಮೀರಿ ಬಂಧನದಲ್ಲಿರುವ ಅಲ್ಪಸಂಖ್ಯಾತರಿಗೆ ಬಿಡುಗಡೆಗೊಳಿಸಲು ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿಯನ್ನು ಒದಗಿಸಲು ತಿಳಿಸಲಾಯಿತು.

**(ಕ್ರಮ : ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ)**

8. <u>ಉನ್ನತ ಶಿಕ್ಷಣದಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯತೆಯ ಅಂಕಿ ಅಂಶಗಳ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿಯನ್ನು ಪಡೆಯುವಂತೆ ತಿಳಿಸಲಾಯಿತು.</u>

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ)**

9. ಮದರಸಗಳ ಉನ್ನತೀಕರಣದ ಬಗ್ಗೆ ಪ್ರಸ್ತಾಪಿಸಲಾಗಿ:-

ಮಾನ್ಯ ಸಂಸತ್ ಸದಸ್ಯರಾದ ಶ್ರೀ. ನಾಸಿರ್ ಹುಸೇನ್ ರವರು ಪ್ರಸ್ತುತ ಮದರಸ ಶಿಕ್ಷಣವನ್ನು ಉತ್ತಮಗೊಳಿಸಲು ಸೂಚಿಸಿದರು. ಸದರಿ ಶಿಕ್ಷಣದ ಜೊತೆ ಸಾಮಾನ್ಯ ಶಿಕ್ಷಣವನ್ನೂ ಸಹ ನೀಡಿದ್ದಲ್ಲಿ, SSLC, PUC ಮತ್ತು ಪದವಿಯನ್ನು ಪಡೆಯಲು ಅನುಕೂಲವಾಗುವುದು ಹಾಗೂ ಇದರಿಂದಾಗಿ ಉದ್ಯೋಗಾವಕಾಶವೂ ಸಹ ಹೆಚ್ಚಾಗುವುದು ಎಂದು ಅಭಿಪ್ರಾಯ ಪಟ್ಟರು. ಈ ಬಗ್ಗೆ ಪರಿಶೀಲಿಸಲು ತಿಳಿಸಲಾಯಿತು.

ಕೇಂದ್ರ ಸರ್ಕಾರದ ನಯಾ ಮಂಜಿಲ್ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಅಧಿಕಾರೇತರ ಸದಸ್ಯರು ಕೋರಿದರು.

**(ಕ್ರಮ: ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಮತ್ತು ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.)**

10. ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಜಾರಿಗೊಳಿಸುತ್ತಿರುವ ವಿದ್ಯಾರ್ಥಿ ವೇತನದ ಬಗ್ಗೆ ಚರ್ಚಿಸಿದಾಗ, ಮಾನ್ಯ ಸಂಸತ್ ಸದಸ್ಯರಾದ ಶ್ರೀ. ನಾಸಿರ್ ಹುಸೇನ್ ರವರು ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕಾಗಿ ನೀಡುತ್ತಿರುವ ವಿದ್ಯಾರ್ಥಿ ವೇತನ ವನ್ನು ಮುಂದುವರೆಸ ಬಹುದೆಂದು ಅಭಿಪ್ರಾಯ ಪಟ್ಟರು. ಅಂತೆಯೇ, ಈ ಬಗ್ಗೆ ಪರಿಶೀಲಿಸುವಂತೆ ತಿಳಿಸಲಾಯಿತು.

**(ಕ್ರಮ : ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ)**

11. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಜಾರಿಗೊಳಿಸುತ್ತಿರುವ ಯೋಜನೆಗಳು ಫಲಕಾರಿಯಾಗಿದೆಯೇ ಎಂಬುದರ ಬಗ್ಗೆ ಸಾಮಾಜಿಕ ಲೆಕ್ಕ ಪರಿಶೋಧನೆ (Social Auditing) ನಡೆಸಬಹುದೆಂದು ಅಧಿಕಾರೇತರ ಸದಸ್ಯರು ಪ್ರಸ್ತಾಪಿಸಿದಾಗ, <u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ಸಹಯೋಗದೊಂದಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು</u>

ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು (Social Auditing) ನಡೆಸಲು ಕ್ರಮ ವಹಿಸುವಂತೆ ತಿಳಿಸಲಾಯಿತು.

**(ಕ್ರಮ : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ )**

12. ಈ ಸಭೆಗೆ 2020-21ನೇ ವರ್ಷದ ಮೊದಲನೇಯ ತ್ರೈಮಾಸಿಕ ಪ್ರಗತಿ ವರದಿ ಮಂಡಿಸಿದ್ದು, ಮುಂದಿನ ಸಭೆಗೆ 2019-20ರ ಕೊನೆಯ ತ್ರೈಮಾಸಿಕ ಹಾಗೂ ವಾರ್ಷಿಕ ಪ್ರಗತಿ ವರದಿಯನ್ನು ಸಹ ಮಂಡಿಸಲು ಸೂಚಿಸಲಾಯಿತು.

**(ಕ್ರಮ: ಕಾರ್ಯದರ್ಶಿ, ಅಲ್ಪಸಂಖ್ಯಾತರ ಆಯೋಗ)**

13. ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಪ್ರಧಾನ ಮಂತ್ರಿ ಜನ ವಿಕಾಸ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಪ್ರಸ್ತಾಪಿಸಿರುವ ಕೆಳಕಂಡ ಕಾಮಗಾರಿಗಳನ್ನು ಅನುಮೋದಿಸಲಾಯಿತು:-

1. Construction of Polytechnic colleges at Towns & Blocks of Minority Concentrated Areas (MCA).
2. Construction of Industrial Training Institute at Towns & Blocks of MCA
3. Construction of Computer Lab, Science lab & Strengthening of Library & E-library at Morarji Desai Residential schools.
4. Providing Personalized Learning Lab at existing Morarji Desai Residential Schools.
5. Integrated Teaching Device & Digital Class room in Government Urdu Schools, MDRS, MAS under PMJVK Scheme.
6. Integrated Teaching Device & Digital Virtual Classroom in existing Maulana Azad Schools under PMJVK Scheme. [52 Moulana Azad Schools]

14. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಿಂದ ಪ್ರಧಾನ ಮಂತ್ರಿ ಜನ ವಿಕಾಸ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಕೆಳಕಂಡ ಕಾಮಗಾರಿಗಳನ್ನು ಪ್ರಸ್ತಾಪಿಸಿ ಸಲ್ಲಿಸಲು ಅನುಮೋದನೆ ನೀಡಲಾಯಿತು:-

| Sl No | District | MCA/ MCB | Project Type | Sharing ratio | No. of units | Unit cost | Central share | State share | Total cost | 1st Instal-lment to be released |
|---|---|---|---|---|---|---|---|---|---|---|
| 1. | Tumkur | Tumkur | Boys Hostel | 60:40 | 1 | 550.00 | 330.00 | 220.00 | 550.00 | 165.00 |
| 2. | Raichur | Raichur | Boys Hostel | 60:40 | 1 | 550.00 | 330.00 | 220.00 | 550.00 | 165.00 |
| 3. | Bellari | Hospet | Boys Hostel | 60:40 | 1 | 550.00 | 330.00 | 220.00 | 550.00 | 165.00 |
| 4. | Bellari | Hospet | Hospital | 60:40 | 1 | 980.00 | 588.00 | 392.00 | 980.00 | 294.00 |
| 5. | Bidar | Basava kalyan | Girls Hostel | 60:40 | 1 | 550.00 | 330.00 | 220.00 | 550.00 | 165.00 |
| 6. | Bidar | Basava kalyan | Boys Hostel | 60:40 | 1 | 550.00 | 330.00 | 220.00 | 550.00 | 165.00 |
| 7. | Shimogha | Shimogha | Boys Hostel | 60:40 | 1 | 1050.00 | 630.00 | 420.00 | 1050.00 | 315.00 |
| 8. | Yadgir | Yadgir | Girls Hostel | 60:40 | 1 | 550.00 | 330.00 | 220.00 | 550.00 | 165.00 |
| 9. | Yadgir | Yadgir | Boys Hostel | 60:40 | 1 | 550.00 | 330.00 | 220.00 | 550.00 | 165.00 |
| 10. | Kolar | Kolar | Boys Hostel | 60:40 | 1 | 550.00 | 330.00 | 220.00 | 550.00 | 165.00 |
| 11. | Vijayapur | Vijayapur | Boys Hostel | 60:40 | 1 | 550.00 | 330.00 | 220.00 | 550.00 | 165.00 |
| **Total** | | | | | | **16320** | **9792** | **6528** | **16320** | **4896** |

ಹಾಗೂ ಕೆಳಕಂಡ ಎರಡು ಪ್ರಸ್ತಾವನೆಗಳನ್ನು ಕೈಬಿಡಲು ತೀರ್ಮಾನಿಸಲಾಯಿತು.

| Sl No | District | MCA/ MCB | Project Type | Sharing ratio | No. of units | Unit cost | Central share | State share | Total cost | 1st Install-ment to be released |
|---|---|---|---|---|---|---|---|---|---|---|
| 1 | Ramanagaram | Ramanagaram | Multi Sectoral Skill Development Centre. | 60:40 | 1 | 9100.00 | 5460.00 | 3641.00 | 9100.00 | 2730.00 |

| | | | | | | | | | | |
|---|---|---|---|---|---|---|---|---|---|---|
| 2. | Raichur | Raichur | Com-mercial Complex | 60:40 | 1 | 240.00 | 144.00 | 96.00 | 240.00 | 72.00 |

15) ನಿಗದಿತ ಅವಧಿಯಲ್ಲಿ ಪೂರ್ಣ ಮಾಹಿತಿಗಳೊಂದಿಗೆ ಮುಂದಿನ ಸಭೆಯನ್ನು ನಡೆಸಲು ಸೂಚಿಸಲಾಯಿತು.

ಕೊನೆಯಲ್ಲಿ ಸಭಾಧ್ಯಕ್ಷರಿಗೆ ಎಲ್ಲಾ ಸಂಸತ್ಸದಸ್ಯರಿಗೆ ಹಾಗೂ ಎಲ್ಲಾ ಅಧಿಕಾರಿಗಳಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಟಿ.ಎಂ. ವಿಜಯ್ ಭಾಸ್ಕರ್)
ಸರ್ಕಾರದ ಮುಖ್ಯ ಕಾರ್ಯದರ್ಶಿ